## ಆಸನದಲ್ಲಿ ಮಳೆ ಬಂದಿದೆ!

ನಮ್ಮ ಯಜಮಾನರು ಕೆಲಸ ಮಾಡುತ್ತಿದ್ದ ಕಂಪನಿಯ ಆಸ್ಪತ್ರೆಯ ಸರ್ಜನ್ ಬಳಿ ತಪಾಸಣೆಗಾಗಿ ಒಬ್ಬರು ಬಂದಿದ್ದರು. ವೈದ್ಯರು ಅವರನ್ನು ಕೂರಿಸಿ, ನಿಮ್ಮ ತೊಂದರೆ ಏನು ಎಂದು ವಿಚಾರಿಸಿದಾಗ, ಆ ವ್ಯಕ್ತಿಯು 'ಡಾಕ್ಟರೇ ನನ್ನ ಆಸನದಲ್ಲಿ ಮಳೆ ಬಂದಿದೆ' ಎಂದರು.

ತಾವು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಸಿಗದಿದ್ದಾಗ ವೈದ್ಯರು ಕೋಪದಿಂದ, 'ಅಲ್ಲಾ.. ಹಾಸನದಲ್ಲಿ ಮಳೆ ಬಂದರೆ ನಿಮಗೇನು? ಹೊರಗಡೆ ಅಷ್ಟೊಂದು ಜನ ತಪಾಸಣೆಗೆ ಕಾಯುತ್ತಿದ್ದಾರೆ. ನೀವು ತಮಾಷೆ ಮಾಡುತ್ತೀರಾ?' ಎಂದು ಜೋರು ಮಾಡಿದಾಗ, ತಪಾಸಣೆಗೆ ಬಂದ ಆ ರೋಗಿ ತನ್ನ ಕುಂಡೆಯನ್ನು (ಆಸನ...ಪಿರ್ರೆ ) ತೋರಿಸುತ್ತಾ 'ಅಲ್ಲಿ ಮಳೆ (piles) ಬಂದಿದೆ. ತುಂಬಾ ನೋವು ಕೊಡುತ್ತೆ ಡಾಕ್ಟರ್ ಸಾಹೇಬರೇ' ಎಂದು ಅಳುವ ಧ್ವನಿಯಲ್ಲಿ ಹೇಳಿ, ತನ್ನ ಹಳ್ಳಿ ಭಾಷೆಯಲ್ಲಿ ಆಸನದಲ್ಲಿ ಮಳೆ (ಪೈಲ್ಸ್) ಬಂದಿದೆ' ಎಂದು ವಿವರಿಸಿದಾಗ ಆತನ ಭಾಷೆಯ ಬಗ್ಗೆ ವೈದ್ಯರಿಗೆ ನಗಬೇಕೋ ಕೋಪ ಮಾಡಿಕೊಳ್ಳಬೇಕೋ ತಿಳಿಯಲಿಲ್ಲ. ಕೂಡಲೇ ಅವನನ್ನು ಮಲಗಿಸಿ ಸೂಕ್ತ ತಪಾಸಣೆ ಮಾಡಿದರು.


ಕಲೆ: ಗಣೇಶ ಆಚಾರ್ಯ

**ಜಯಮಾಲಾ ಪೈ**

## ಸೊಪ್ಪಿನ ಪೇಸ್ಟ್

ಒಂದು ಮಧ್ಯಾಹ್ನ ಸ್ನೇಹಿತರು ಮನೆಗೆ ಬಂದಿದ್ದರು.ಆ ಸಮಯದಲ್ಲಿ ನನ್ನ ಶ್ರೀಮತಿಯವರು ಮಕ್ಕಳೊಂದಿಗೆ ಹೊರಗಡೆ ಹೋಗಿದ್ದರು. ಸ್ನೇಹಿತರಿಗೆ ಮಜ್ಜಿಗೆಯನ್ನು ಕೊಡೋಣವೆಂದು ಮೊಸರನ್ನು ಕಡೆದೆ. ಆಗ ನೆನಪಿಗೆ ಬಂತು, ನಮ್ಮ ಮನೆಯವರು ದಿನವೂ ಮಜ್ಜಿಗೆಗೆ ಬೆರೆಸಲು ಕರಿಬೇವು, ಕೊತ್ತಂಬರಿ ಸೊಪ್ಪು, ಪುದೀನಾ, ಜೀರಿಗೆ ಮತ್ತು ಶುಂಠಿಯನ್ನು ಮಿಕ್ಸಿಗೆ ಹಾಕಿ ಆ ಪೇಸ್ಟನ್ನು ಒಂದು ಬಾಕ್ಸಿಗೆ ಹಾಕಿ ಫ್ರಿಡ್ಜ್‌ನಲ್ಲಿ ಇಟ್ಟಿದ್ದರು. ಮಜ್ಜಿಗೆಗೆ ಆ ಹಸಿರು ಪೇಸ್ಟನ್ನು ಮಿಶ್ರಣ ಮಾಡಿ ಸ್ವಲ್ಪ ಉಪ್ಪನ್ನು ಸೇರಿಸಿ ಸ್ನೇಹಿತರಿಗೆ ಕೊಟ್ಟೆ.

ಒಂದು ಗುಟುಕು ಕುಡಿದ ಕೂಡಲೇ ಇಬ್ಬರೂ ಮುಖ ಕಿವುಚಿಕೊಂಡು ಮಜ್ಜಿಗೆ ಲೋಟವನ್ನು ಕೆಳಗೆ ಇಟ್ಟರು. ನಾನು ಏಕೆಂದು ಕೇಳಿದಾಗ ತುಂಬಾ ಕಹಿ ಎಂದರು. ಅಷ್ಟರಲ್ಲಿ ಮನೆಯವರು ಬಂದರು. ನಡೆದದ್ದನ್ನು ವಿವರಿಸಿದಾಗ ಅವರಿಗೆ ಅರ್ಥವಾಯಿತು. ಏನೆಂದರೆ ನಾನು ಮಜ್ಜಿಗೆಗೆ ಮೇಲೆ ತಿಳಿಸಿದ ಪೇಸ್ಟನ್ನು ಹಾಕಿ ಕೊಡುವ ಬದಲು, ನನ್ನ ಮಗಳು ಮುಖಕ್ಕೆ ಹಾಕಿಕೊಳ್ಳಲೆಂದು ಪ್ರತ್ಯೇಕವಾಗಿ ಅರೆದು ಫ್ರಿಡ್ಜಿನಲ್ಲಿಟ್ಟಿದ್ದ ಇಟ್ಟಿದ್ದ ಬೇವಿನ ಸೊಪ್ಪಿನ ಪೇಸ್ಟನ್ನು ಹಾಕಿಕೊಟ್ಟಿದ್ದೆ ಎಂದು!.



**ಲಿಂಗದಹಳ್ಳಿ ಚಂದ್ರಶೇಖರ್**